ನನಗೆ ಮೋಸ ಮಾಡುತ್ತಿರಬಹುದೇ ಎಂಬ ಆತಂಕ, ಅನುಮಾನಗಳು ಶುರುವಾಗಿ ನಾನು ಲಘುವಾಗಿ ಕಂಪಿಸತೊಡಗಿದೆ.

ಪ್ರೊಫೆಸರರು ''ವಸೂ... ಪ್ಲೀಸ್ ಕುತ್ಕೋ...'' ಎಂದ ತಕ್ಷಣವೇ "ಓಕೆ ಡ್ಯಾಡ್..." ಎಂದು ಮೆಲುವಾಗಿ ನುಡಿದು ನನ್ನ ಎದುರಿಗಿದ್ದ ಕುರ್ಚಿಯಲ್ಲಿ ಕುಳಿತಳು. ಪಾಳುಬಿದ್ದ ಅರಮನೆಯಲ್ಲಿ ರಾಜಕುಮಾರಿಯೊಬ್ಬಳು ಪ್ರತ್ಯಕ್ಷವಾದಂತಾಯಿತು!

ಅದ್ಭುತ ಸೌಂದರ್ಯರಾಶಿ! ಮುಂಬೈನಲ್ಲೂ ಅಂತಹ ಸುಂದರಿಯನ್ನು ನಾನು ನೋಡಿರಲಿಲ್ಲ!!

ಕಾಳಿದಾಸನ ಶಾಕುಂತಲೆಯೇ ಎದುರಿಗೆ ಕುಳಿತಂತಾಗಿತ್ತು. ನಸುಗೆಂಪು ಮುಖದಲ್ಲಿನ ನೀಳ ನಾಸಿಕ, ತೊಂಡೆಯ ತುಟಿಗಳು, ಕಮಲದ ಕಣ್ಣುಗಳು, ಸೊಗಸಾಗಿ ಹೆಣೆದಿದ್ದ ಉದ್ದನೆಯ ಜಡೆಯ ಕಪ್ಪು ಕೇಶರಾಶಿ. ಮಧ್ಯಮ ಎತ್ತರದ, ತುಂಬಿದ ದೇಹದ ಹುಡುಗಿ. ಉದ್ದನೆಯ ನೀಳ ಕೈಬೆರಳುಗಳು, ಕಾಲ್ಬೆರಳುಗಳು. ಆಕೆಯನ್ನು ವರ್ಣಿಸಲು ನಿಜವಾಗಿಯೂ ನನ್ನಲ್ಲಿ ಪದಗಳಿಲ್ಲ! ನಾನು ಮೂರ್ಛೆ ತಪ್ಪುವುದು ಬಾಕಿಯಿತ್ತು. ಆಕೆಯನ್ನೇ ತಿನ್ನವಂತೆ ನೋಡುತ್ತಾ ಯಾವುದೋ ಲೋಕದಲ್ಲಿ ಮುಳುಗಿದ್ದ ನನ್ನನ್ನು "ಹೌ ಈಸ್ ಮೈ ಡಾಟರ್..." ಎಂದು ಪ್ರೊಫೆಸರರು ನಕ್ಕು ಕೇಳಿ ಎಚ್ಚರಿಸಿದಾಗ ನಾನು ವಾಸ್ತವಕ್ಕೆ ಮರಳಿದೆ.

"ಬ್ಯೂಟಿಫುಲ್ ಸರ್... ಸಿಂಪ್ಲೀ ಬ್ಯೂಟಿಫುಲ್ ಸರ್..." ಎಂದು ಉದ್ಗರಿಸಿದೆ.

"ವಸೂ... ಮೀಟ್ ಮಿಸ್ಟರ್ ವಿಶಾಲ್... ಎಂಜಿನಿಯರ್..." ಪ್ರೊಫೆಸರರು ಮಂದಹಾಸ ಬೀರುತ್ತಾ ಹೇಳಿದರು.

ತಕ್ಷಣವೇ ಎದ್ದು ನಿಂತ ಆ ಹುಡುಗಿ "ಐಯಾಮ್ ವಸೂ... ವಸುಂಧರಾ... ಗ್ಲಾಡ್ ಟು ಮೀಟು ಯೂ..." ಎಂದು ಮೆಲುವಾಗಿ ಹೇಳಿ, ಮುಗುಳ್ನಗುತ್ತಾ ನನ್ನತ್ತ ಕೈಚಾಚಿದಳು. ಹುಡುಗಿಯ ಕೆನ್ನೆಯಲ್ಲಿ ಬಿದ್ದ ಗುಳಿಗಳು ನನ್ನ ಹೃದಯದ ಬಡಿತವನ್ನು ಏರಿಸಿಯೇಬಿಟ್ಟವು. ನಂಬಲಸಾಧ್ಯ! ರೋಬೋ ಎಂದು ನಂಬಲಸಾಧ್ಯ!

ನಾನೂ ಎದ್ದು ಡವಗುಡುತ್ತಿದ್ದ ನನ್ನ ಹೃದಯದ ಬಡಿತವನ್ನು ತಹಬಂದಿಗೆ ತಂದುಕೊಂಡು ಅವಳ ಕೈಕುಲುಕಿದೆ. ಇದೇನಿದು ಮಾನವ ಸ್ಪರ್ಶ? ರೋಬೋನ ಕೈಗಳಲ್ಲ ಇವು! ಇದರಲ್ಲಿ ಏನೋ ಮೋಸವಿದೆ ಎಂದೆನಿಸಿದರೂ ಪ್ರೊಫೆಸರರ ಮೇಲೆ ಅನುಮಾನಪಡುವುದು ನನ್ನಿಂದಾಗಲಿಲ್ಲ. ಆದರೆ ನನ್ನ ಮುಖದ ಭಾವನೆ ಪ್ರೊಫೆಸರರಿಗೆ ಅರ್ಥವಾಗಿರಬೇಕು.

ತಕ್ಷಣವೇ ಅಲ್ಲಿಂದ ಎದ್ದು "ವಸೂ... ಪ್ಲೀಸ್ ಕಮ್..." ಎಂದವರೇ ಕೊಠಡಿಯ ಒಳಗೆ ಹೋದರು. ಹುಡುಗಿ ನಿಶ್ಯಬ್ದವಾಗಿ ಅವರನ್ನು ಹಿಂಬಾಲಿಸಿದಳು. ಕೊಠಡಿಯ ಬಾಗಿಲು ಮುಚ್ಚಿಕೊಂಡಿತು. ಏನೆಂದು ತಿಳಿಯದೇ ಗೊಂದಲಗೊಂಡ ನನಗೆ ಪ್ರತಿ ಕ್ಷಣಗಳು ಯುಗಗಳಾದವು.

ಎಷ್ಟು ಹೊತ್ತಾಯಿತು ಎಂದು ತಿಳಿಯಲಿಲ್ಲ. ನನ್ನ ಮನಸ್ಸಿನಲ್ಲಿ ಆತಂಕ, ಕುತೂಹಲ, ಸಂದೇಹಗಳು ಅಲೆಅಲೆಯಾಗಿ ಚಿಮ್ಮುತ್ತಿದ್ದವು.

"ವಿಶಾಲ್... ಪ್ಲೀಸ್ ಕಮ್ ಇನ್‌ಸೈಡ್..." ಎಂದು ಪ್ರೊಫೆಸರರು ಒಳಗಿನಿಂದ ಕೂಗಿದರು. ಎದ್ದು ಮೆಲ್ಲನೆ ಕೊಠಡಿಯ ಬಾಗಿಲು ತಳ್ಳಿ ಒಳಗೆ ಹೋದೆ. ಅಲ್ಲಿನ ದೃಶ್ಯ ಕಂಡು ನನಗೆ ಮತ್ತೊಮ್ಮೆ ತೀವ್ರ ಆಘಾತವಾಯಿತು.

ಕೆಲವು ನಿಮಿಷಗಳ ಹಿಂದೆ ಜೀವತುಂಬಿಕೊಂಡು ಮುಗುಳ್ನಗುತ್ತಾ ನಲಿಯುತ್ತಿದ್ದ ಚೆಲುವೆ ನಿರ್ಜೀವ ಬೊಂಬೆಯಾಗಿ, ನಿಶ್ಚಲವಾಗಿ ಅಲ್ಲಿದ್ದ ಉದ್ದನೆಯ ಹಳೆಯ ಮೇಜಿನ ಮೇಲೆ ಮಲಗಿದ್ದಳು!

ನನಗೆ ನಿಜಕ್ಕೂ ತೀವ್ರ ನಿರಾಸೆಯಾಯಿತು.

"ವಿಶಾಲ್... ನಿನ್ನ ಮನಸ್ಸಿನಲ್ಲಿ ಮೂಡಿದ ಸಂದೇಹ ನನಗೆ ಅರಿವಾಯಿತು. ನೀನು ನನ್ನ